# ಟೋಪಿ ಧರಿಸಿ ಬಂದ ಉಪೇಂದ್ರ!



ಉಪೇಂದ್ರ ನಾಯಕತ್ವದ 'ಟೋಪಿವಾಲ' ಸಿನಿಮಾ ಹಲವು ಕಾರಣಗಳಿಂದ ಕುತೂಹಲ ಕೆರಳಿಸಿರುವ ಸಿನಿಮಾ. ಚುನಾವಣೆಗಳ ಕಾಲದಲ್ಲಿ ತೆರೆಕಾಣುತ್ತಿರುವ (ಮಾರ್ಚ್ 15) ಈ ಚಿತ್ರದ ಪ್ರಮುಖ ಹೂರಣ ಕೂಡ ರಾಜಕೀಯವೇ. ಇದೊಂದು 'ಪೊಲಿಟಿಕಲ್ ಸಟೈರ್' ಎನ್ನುವ ನಿರ್ದೇಶಕ ಶ್ರೀನಿವಾಸ್, ಉಳಿದ ಕಥೆಯನ್ನು ತೆರೆಯ ಮೇಲೆ ನೋಡಿ ಎಂದು ಗುಟ್ಟು ಮಾಡುತ್ತಾರೆ.

ನಾಯಕನಾಗಿ ನಟಿಸುವುದರ ಜೊತೆಗೆ ಉಪೇಂದ್ರ ಅವರು ಕಥೆ–ಚಿತ್ರಕಥೆ ರಚಿಸಿರುವುದು 'ಟೋಪಿವಾಲ' ಚಿತ್ರದ ಇನ್ನೊಂದು ವಿಶೇಷ. ಉಪೇಂದ್ರ ಅವರ ಚಿತ್ರಗಳ ಕಥೆಯಲ್ಲಿ ರಾಜಕಾರಣದ ಒಳಸುಳಿಗಳು ಇರುವುದೂ, ಈಚಿನ ದಿನಗಳಲ್ಲಿ ಸಕ್ರಿಯ ರಾಜಕಾರಣದ ಬಗ್ಗೆ ಅವರು ಆಸಕ್ತಿ ವ್ಯಕ್ತಪಡಿಸುತ್ತಿರುವುದು ಕೂಡ 'ಟೋಪಿವಾಲ'ನ ಬಗ್ಗೆ ನಿರೀಕ್ಷೆಗಳು ಹೆಚ್ಚಾಗಲು ಕಾರಣವಾಗಿವೆ.

ಉಪೇಂದ್ರರಿಗೆ ಈ ಸಿನಿಮಾ ಗೆಲ್ಲಬೇಕಾದ ಅನಿವಾರ್ಯತೆಯಿದೆ. ಅವರ ಈಚಿನ ಚಿತ್ರಗಳಾದ 'ಗಾಡ್‌ಫಾದರ್' ಹಾಗೂ 'ಕಲ್ಪನಾ' ಚಿತ್ರಗಳ ಪ್ರೋಗ್ರೆಸ್ ಕಾರ್ಡ್ ಅಷ್ಟೇನೂ ಆಶಾದಾಯಕವಾಗಿರಲಿಲ್ಲ. ಸ್ವಂತ ಬ್ಯಾನರ್ ಚಿತ್ರವೊಂದನ್ನು ಸದ್ಯದಲ್ಲೇ ಪ್ರಕಟಿಸುವ ಸಿದ್ಧತೆಯಲ್ಲಿ ಉಪೇಂದ್ರ ಇದ್ದಾರೆ. ಈ ಎರಡೂ ಕಾರಣಗಳಿಗಾಗಿ 'ಟೋಪಿವಾಲ' ಗೆಲ್ಲುವುದು ಅವರಿಗೆ ಬಹಳ ಮುಖ್ಯವಾಗಿದೆ.

ನಿರ್ದೇಶಕ ಶ್ರೀನಿವಾಸ್ 'ಟೋಪಿವಾಲ' ರೂಪಿಸುವಲ್ಲಿ ಸಾಕಷ್ಟು ಶ್ರಮಪಟ್ಟಿದ್ದಾರಂತೆ. ವಿಧೇಯ ವಿದ್ಯಾರ್ಥಿಯಂತೆ ಹೋಂ ವರ್ಕ್ ಮಾಡಿದ್ದಾರಂತೆ. 'ಸಂಭಾಷಣೆಯನ್ನೇ ಹತ್ತು ಸಲ ತಿದ್ದಿ ಬರೆದಿರುವೆ. ನನ್ನ ಪ್ರಯತ್ನ ಪ್ರೇಕ್ಷಕರಿಗೆ ಇಷ್ಟವಾಗಲಿದೆ' ಎನ್ನುವ ನಂಬಿಕೆ ಅವರದು. 'ನಮ್ಮ ಸಿನಿಮಾಕ್ಕೆ ಹಲವು ಆಯಾಮಗಳಿವೆ. ಹಲವು ಸಲ ನೋಡಬೇಕಾದ ಈ ಚಿತ್ರ ತಲೆ ಇಲ್ಲದವರಿಗಲ್ಲ' ಎನ್ನುವ ಮಾರ್ಮಿಕ ಮಾತನ್ನೂ ಅವರು ಆಡುತ್ತಾರೆ. ಭಾವನಾ, ಅಚ್ಯುತಕುಮಾರ್, ಮೈತ್ರೀಯ, ರಾಜು ತಾಳಿಕೋಟೆ ಚಿತ್ರದ ತಾರಾಗಣದಲ್ಲಿ ಇರುವ ಪ್ರಮುಖರು.

■ ರಘು

